# 2015 ನೇ ಸಾಲಿನ ಹೈಸ್ಕೂಲ್ ಶಿಕ್ಷಕರ ನೇಮಕಾತಿ ಪರೀಕ್ಷೆಯ ಕನ್ನಡ ಪ್ರಶ್ನೆಪತ್ರಿಕೆ ಪಿಡಿಎಫ್


**Welcome To Edutube Kannada Website**

**www.edutubekannada.com**

ಎಜ್ಯುಟ್ಯೂಬ್ ಕನ್ನಡ ವೆಬ್‌ಸೈಟ್ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಪಯುಕ್ತವಾದ ಪಿಡಿಎಫ್ ನೋಟ್ಸ್‌ಗಳನ್ನು ಉಚಿತವಾಗಿ ಒದಗಿಸುವ ಕರ್ನಾಟಕದ ಅತ್ಯುತ್ತಮ ಜಾಲತಾಣವಾಗಿದೆ.

ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಡಿಒ, ಪಿಎಸ್‌ಐ, ಟಿಇಟಿ, ಸಿಇಟಿ, ಎಫ್‌ಡಿಎ, ಎಸ್‌ಡಿಎ, ಆರ್‌ಆರ್‌ಬಿ, ಎಸ್‌ಎಸ್‌ಸಿ, ಸೇರಿದಂತೆ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳ ಪಿಡಿಎಫ್ ನೋಟ್ಸ್‌ಗಳನ್ನು ಉಚಿತವಾಗಿ ಡೌನ್‌ಲೋಡ್ ಮಾಡಲು ನಮ್ಮ ವೆಬ್‌ಸೈಟ್‌ಗೆ ಭೇಟಿ ನೀಡಿ...!!!

: ನಮ್ಮ ವೆಬ್‌ಸೈಟ್ ವಿಳಾಸ :

www.edutubekannada.com

www.kpscnotesmcqs.in www.allpdfnotes.com

ನಮ್ಮ ಟೆಲಿಗ್ರಾಮ್ ಚಾನೆಲ್‌ಗೆ ಸೇರಿಕೊಳ್ಳಿ

https://t.me/edutubekannada

**EXAMINATION CODE : 04** HSTR-2

ಪ್ರಶ್ನೆಪತ್ರಿಕೆ ಪುಸ್ತಿಕೆಯ ಕ್ರಮಸಂಖ್ಯೆ

**7740213**

| ಜಿಲ್ಲಾ ಸಂಕೇತ | | ನೋಂದಣಿ ಸಂಖ್ಯೆ | | | | | | | |
|---|---|---|---|---|---|---|---|---|---|
| | | | | | | | | | |

# ಪ್ರಶ್ನೆ ಪತ್ರಿಕೆ ಪುಸ್ತಿಕೆ - ದ್ವಿತೀಯ ಪತ್ರಿಕೆ

**(ಪ್ರಶ್ನೆ ಪತ್ರಿಕೆಯಲ್ಲಿನ ಎಲ್ಲಾ ಸೂಚನೆಗಳನ್ನು ದಯವಿಟ್ಟು ಓದಿ)**

**ವಿಷಯ : ಕನ್ನಡ ಭಾಷೆ**

**ಗರಿಷ್ಠ ಅಂಕಗಳು : 100** **ಗರಿಷ್ಠ ಅವಧಿ : 2.00 ಗಂಟೆಗಳು** **ವಿಷಯ ಸಂಕೇತ : KA**

## ಅಭ್ಯರ್ಥಿಗಳಿಗೆ ಸೂಚನೆಗಳು

1. 100 ಪ್ರಶ್ನೆಗಳಿರುವ ಮೊಹರಾಗಿರುವ ಪ್ರಶ್ನೆಪತ್ರಿಕೆ ಪುಸ್ತಿಕೆಯಲ್ಲಿ ಬಿಡಿ ಓ.ಎಂ.ಆರ್. ಉತ್ತರ ಪತ್ರಿಕೆಯು ಅಡಕಗೊಂಡಿದೆ. ಇದನ್ನು ನಿಮಗೆ ನೀಡಲಾಗಿದೆ.
2. ನಿಮಗೆ ನೀಡಲಾಗಿರುವ ಪ್ರಶ್ನೆ ಪತ್ರಿಕೆಯು ಪ್ರವೇಶ ಪತ್ರದಲ್ಲಿರುವಂತೆ ನೀವು ಆಯ್ಕೆಮಾಡಿಕೊಂಡ ವಿಷಯದ ಪತ್ರಿಕೆಯೇ ಎಂಬುದನ್ನು ದೃಢಪಡಿಸಿಕೊಳ್ಳುವುದು.
3. ಪ್ರಶ್ನೆಪತ್ರಿಕೆಯ ಸೀಲನ್ನು ಅತೀ ಜಾಗರೂಕತೆಯಿಂದ ಬಿಡಿಸಿ ಅಡಕವಾಗಿರುವ ಓ.ಎಂ.ಆರ್. ಬಿಡಿ ಉತ್ತರ ಪತ್ರಿಕೆಯನ್ನು ಹೊರತೆಗೆದು, ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಕೇಳಿರುವ ಮಾಹಿತಿಯನ್ನು ಅತೀ ಜಾಗರೂಕತೆಯಿಂದ ಕ್ರಮಸಂಖ್ಯೆ 1 ರಿಂದ 10 ರವರೆಗೂ ಭರ್ತಿ ಮಾಡಿ. ತಪ್ಪಿದ್ದಲ್ಲಿ ಮೌಲ್ಯಮಾಪನದಲ್ಲಿ ಉಂಟಾಗುವ ತೊಡಕು ಮತ್ತು ಪರಿಣಾಮಗಳಿಗೆ ನೀವೇ ಜವಾಬ್ದಾರರು.
4. ನಿಮಗೆ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಕ್ರಮಸಂಖ್ಯೆಯನ್ನು ನಿಮಗೆ ನೀಡಿರುವ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿನ ಕ್ರಮಸಂಖ್ಯೆ 4 ರಲ್ಲಿ ಭರ್ತಿ ಮಾಡಬೇಕು.
5. ನೀವು ಆಯ್ಕೆಮಾಡಿಕೊಂಡಿರುವ ವಿಷಯ ಸಂಕೇತವನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿನ ಕ್ರಮಸಂಖ್ಯೆ 9 ರಲ್ಲಿ ಭರ್ತಿ ಮಾಡಬೇಕು. ಪರೀಕ್ಷಾ ಅವಧಿಯಲ್ಲಿ : (ಅ) ಪ್ರತಿ ಪ್ರಶ್ನೆಯನ್ನು ಜಾಗರೂಕತೆಯಿಂದ ಓದಿರಿ. (ಆ) ಪ್ರತಿ ಪ್ರಶ್ನೆಗೆ ನೀಡಲಾಗಿರುವ ನಾಲ್ಕು ಉತ್ತರಗಳ ಪೈಕಿ ಸರಿಯಾದ ಉತ್ತರವನ್ನು ಕಂಡುಹಿಡಿಯಿರಿ. (ಇ) ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಪ್ರತಿ ಪ್ರಶ್ನೆಗೆ ಸರಿ ಹೊಂದುವ ಉತ್ತರವನ್ನು ಗುರುತಿಸಲು ನೀಡಲಾಗಿರುವ ನಾಲ್ಕು ವೃತ್ತಗಳ ಪೈಕಿ ಸರಿಯಾದ ವೃತ್ತವನ್ನು ನೀಲಿ/ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್ ಮಾತ್ರ ಉಪಯೋಗಿಸಿ ಗುರುತು ಮಾಡಿ. ಉದಾಹರಣೆಗೆ, ಒಂದು ಪ್ರಶ್ನೆ ಪತ್ರಿಕೆಯಲ್ಲಿನ 20 ನೇ ಪ್ರಶ್ನೆಯ ಸರಿ ಉತ್ತರವು ಕ್ರಮಸಂಖ್ಯೆ (3) ಆಗಿದ್ದಲ್ಲಿ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಕ್ರಮಸಂಖ್ಯೆ 20 ರ ಮುಂದೆ ಈ ಕೆಳಗೆ ತಿಳಿಸಿರುವ ರೀತಿಯಲ್ಲಿ ನೀಲಿ/ಕಪ್ಪು ಬಾಲ್ ಪಾಯಿಂಟ್ ಪೆನ್ ಉಪಯೋಗಿಸಿ ವೃತ್ತವನ್ನು ಗುರುತು ಮಾಡುವುದು.

**20.** ① ② ● ④ (ಇದು ಉದಾಹರಣೆ ಮಾತ್ರ)

6. ಪ್ರಶ್ನೆಪತ್ರಿಕೆ ಪುಸ್ತಿಕೆಯ ಪುಟಗಳಲ್ಲಿ ಖಾಲಿ ಜಾಗ ಬಿಟ್ಟಿರುವಲ್ಲಿ ಮಾತ್ರ ಉತ್ತರವನ್ನು ಕಂಡು ಹಿಡಿಯುವ ಕಚ್ಚಾ ಕಾರ್ಯವನ್ನು (ರಫ್ ವರ್ಕ್) ಮಾಡತಕ್ಕದ್ದು. ಕಚ್ಚಾ ಕಾರ್ಯವನ್ನು ಓ.ಎಂ.ಆರ್. ಉತ್ತರಪತ್ರಿಕೆಯಲ್ಲಿ ಮಾಡತಕ್ಕದ್ದಲ್ಲ.
7. ಒಂದು ಪ್ರಶ್ನೆಗೆ ಉತ್ತರವಾಗಿ ಒಂದಕ್ಕಿಂತ ಹೆಚ್ಚು ವೃತ್ತಗಳನ್ನು ಗುರುತು ಮಾಡಬಾರದು. ಉದಾಹರಣೆಯನ್ನು ಓ.ಎಂ.ಆರ್. ಉತ್ತರಪತ್ರಿಕೆಯಲ್ಲಿ ನೋಡಿ ಅನುಸರಿಸುವುದು.
8. ಓ.ಎಂ.ಆರ್. ಉತ್ತರಪತ್ರಿಕೆಯ ನಿಗದಿತ ಸ್ಥಳದಲ್ಲಿ ಅಭ್ಯರ್ಥಿ ಹಾಗೂ ಕೊಠಡಿ ಮೇಲ್ವಿಚಾರಕರು ತಪ್ಪದೇ ಸಹಿ ಮಾಡಬೇಕು. ನಿಗದಿತ ಸ್ಥಳದಲ್ಲಿ ಕಡ್ಡಾಯವಾಗಿ ಅಭ್ಯರ್ಥಿ ಎಡಗೈ ಹೆಬ್ಬೆರಳಿನ ಗುರುತನ್ನು ಹಾಕುವುದು. ತಿದ್ದಿರುವುದು & ಯಾವುದೇ ರೀತಿಯ ಬದಲಾವಣೆಗಳನ್ನು ಮಾನ್ಯ ಮಾಡುವುದಿಲ್ಲ.
9. ನಿಮಗೆ ಉತ್ತರಿಸಲು ನೀಡಿರುವ ಓ.ಎಂ.ಆರ್.ಉತ್ತರಪತ್ರಿಕೆಯು ಕಾರ್ಬನ್ ರಹಿತ ಪ್ರತಿಯೊಂದಿಗೆ ಇದೆ. ಪರೀಕ್ಷಾ ಅವಧಿ ಮುಗಿದ ನಂತರ, ಉತ್ತರಿಸಿದ ಮೂಲ ಓ.ಎಂ.ಆರ್. ಉತ್ತರಪತ್ರಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಒಪ್ಪಿಸತಕ್ಕದ್ದು. ಕಾರ್ಬನ್ ರಹಿತ ಪ್ರತಿಯನ್ನು ಅಭ್ಯರ್ಥಿಯು ಇಟ್ಟುಕೊಳ್ಳಬೇಕು.
10. ಪರೀಕ್ಷಾ ಕೊಠಡಿಯೊಳಗೆ ಕ್ಯಾಲ್ಕ್ಯುಲೇಟರ್, ಪೇಜರ್ ಮತ್ತು ಮೊಬೈಲ್ ದೂರವಾಣಿಯನ್ನು ತರುವುದನ್ನು ನಿಷೇಧಿಸಿದೆ.
11. **ಪರೀಕ್ಷಾ ಸಮಯದಲ್ಲಿ ಯಾವುದೇ ರೀತಿಯ ಅವ್ಯವಹಾರ ಕಂಡು ಬಂದಲ್ಲಿ ಅಂತಹವರನ್ನು ನೇಮಕಾತಿಗೆ ಅರ್ಹರಲ್ಲವೆಂದು ಪರಿಗಣಿಸಿ ಉತ್ತರ ಪತ್ರಿಕೆಯನ್ನು ಮಾನ್ಯ ಮಾಡುವುದಿಲ್ಲ ಮತ್ತು ನಿಯಮಾನುಸಾರ ಕ್ರಮ ಜರುಗಿಸಲಾಗುವುದು.**

## ಓ.ಎಂ.ಆರ್. ಉತ್ತರಪತ್ರಿಕೆ ಭರ್ತಿ ಮಾಡಲು ಸೂಚನೆಗಳು

(1) ಪ್ರತಿಯೊಂದು ಪ್ರಶ್ನೆಗೂ ಒಂದೇ ಒಂದು ಸರಿಯಾದ ಉತ್ತರವಿರುತ್ತದೆ. (2) ವೃತ್ತಗಳನ್ನು ನೀಲಿ ಅಥವಾ ಕಪ್ಪು ಬಾಲ್ ಪಾಯಿಂಟ್ ಪೆನ್ನಿನಿಂದ ಮಾತ್ರ ತುಂಬಬೇಕು. ಉತ್ತರವನ್ನು ತುಂಬಿದ ಮೇಲೆ ಬದಲಿಸಲು ಪ್ರಯತ್ನಿಸಬೇಡಿ. (3) ವೃತ್ತಗಳಲ್ಲಿರುವ ಸಂಖ್ಯೆಗಳು ಕಾಣದಂತೆ ವೃತ್ತವನ್ನು ಸಂಪೂರ್ಣವಾಗಿ ತುಂಬಬೇಕು. (4) ಉತ್ತರಪತ್ರಿಕೆಯ ಮೇಲೆ ಯಾವುದೇ ರೀತಿಯ ಗುರುತು, ಗೀಟು ಅಥವಾ ಚುಕ್ಕೆಯಾಗಲೀ ಮಾಡಬಾರದು. (5) ಇದು ಕಾರ್ಬನ್ ರಹಿತ ಉತ್ತರಪತ್ರಿಕೆ. ಉತ್ತರಪತ್ರಿಕೆಯ ಎರಡನೇ ಪ್ರತಿಯನ್ನು ಪ್ರತ್ಯೇಕವಾಗಿ ತುಂಬುವ ಅಗತ್ಯ ಇಲ್ಲ.

Join Telegram https://t.me/edutubekannada

Downloaded from www.edutubekannada.com



## KANNADA LANGUAGE

1. 'ಕುವೆಂಪು ಯುಗ' ಎಂಬ ವಿಮರ್ಶಾಕೃತಿ ಇವರದು
   (1) ಪಿ.ಆರ್. ನಾಗರಾಜ್
   (2) ಜಿ.ಎಚ್. ನಾಯಕ
   (3) ಕೆ.ಎಸ್. ಭಗವಾನ್
   (4) ಸಿ.ಎನ್. ರಾಮಚಂದ್ರನ್

2. 'ಮಂದಣ್ಣ' ಪಾತ್ರ ಚಿತ್ರಣವಿರುವ ಪೂರ್ಣಚಂದ್ರ ತೇಜಸ್ವಿಯವರ ಕೃತಿ
   (1) ಚಿದಂಬರ ರಹಸ್ಯ
   (2) ಜುಗಾರಿ ಕ್ರಾಸ್
   (3) ಮಾಯಾ ಲೋಕ
   (4) ಕರ್ವಾಲೋ

3. 'ಅರವಸು-ನಿತ್ತಿಲೆ' ಪಾತ್ರಗಳಿರುವ ಗಿರೀಶ್ ಕಾರ್ನಾಡರ ನಾಟಕ
   (1) ಅಗ್ನಿ ಮತ್ತು ಮಳೆ
   (2) ಹಯವದನ
   (3) ಹಿಟ್ಟಿನ ಹುಂಜ
   (4) ಒಡಕಲು ಬಿಂಬ

4. 'ಗೌಡಿ' ಕಾವ್ಯ ಮಾರ್ಗದ ಪ್ರಧಾನ ಕಾವ್ಯಗುಣ
   (1) ಮಾದುರ್ಯ
   (2) ಕಾಂತಿ
   (3) ಉದಾರತ್ವ
   (4) ಓಜಸ್ಸು

5. ಭರತನ ನಾಟ್ಯ ಶಾಸ್ತ್ರಕ್ಕೆ 'ಅಭಿನವ ಭಾರತೀ' ಎಂಬ ವ್ಯಾಖ್ಯಾನವನ್ನು ಬರೆದವರು
   (1) ಆನಂದ ವರ್ಧನ
   (2) ಅಭಿನವ ಗುಪ್ತ
   (3) ರುದ್ರಟ
   (4) ಕುಂತಕ

6. 'ವಕ್ರೋಕ್ತಿ ಜೀವಿತ' ಅಲಂಕಾರ ಗ್ರಂಥದ ಕರ್ತೃ
   (1) ಭರತ
   (2) ವಾಮನ
   (3) ಕುಂತಕ
   (4) ವಿಶ್ವನಾಥ

7. ಪ್ರಾದೇಶಿಕ ವೈಶಿಷ್ಟ್ಯವನ್ನುಳ್ಳ ಭಾಷಾ ರಚನೆಗಳನ್ನು ಗುರುತಿಸುವ ಪರಂಪರೆಯಲ್ಲಿ ರುದ್ರಟ ಹೇಳುವ 'ರೀತಿ'ಯ ಬಗೆ
   (1) ವೈದರ್ಭೀ
   (2) ಗೌಡಿ
   (3) ಪಾಂಚಾಲಿ
   (4) ಲಾಟೀಯಾ

8. ಕಾವ್ಯದಲ್ಲಿ ಪರಮವೂ ಪ್ರಧಾನವೂ ಆಗಿ ನಿಲ್ಲುವ ವ್ಯಂಗ್ಯಾರ್ಥಕ್ಕೆ ಇರುವ ಹೆಸರು
   (1) ಧ್ವನಿ
   (2) ರಸ
   (3) ಭಾವ
   (4) ವಕ್ರೋಕ್ತಿ



Join Telegram https://t.me/edutubekannada

Downloaded from www.edutubekannada.com



9. 'ರೀತಿ ಪ್ರಸ್ಥಾನ' ದ ಆದ್ಯ ಗ್ರಂಥ
   (1) ಕಾವ್ಯಪ್ರಕಾಶ
   (2) ಕಾವ್ಯಾಲಂಕಾರ ಸೂತ್ರವೃತ್ತಿ
   (3) ಕಾವ್ಯಾದರ್ಶ
   (4) ಕಾವ್ಯಾಲಂಕಾರ

10. ಸಾತ್ವಿಕ ಭಾವಗಳ ಸಂಖ್ಯೆ
    (1) ಎಂಟು
    (2) ಮೂರು
    (3) ಎರಡು
    (4) ಆರು

11. 'ರಮಣೀಯಾರ್ಥ ಪ್ರತಿಪಾದಕ : ಶಬ್ಧ : ಕಾವ್ಯಂ' ಈ ಕಾವ್ಯ ಲಕ್ಷಣ ಕುರಿತ ಹೇಳಿಕೆಯಲ್ಲಿ 'ರಮಣೀಯಾರ್ಥ' ಎಂದರೆ
    (1) ವಾಚ್ಯವಲ್ಲದ ವ್ಯಂಗ್ಯ
    (2) ಲೋಕೋತ್ತರವಾದ ಆಹ್ಲಾದ
    (3) ಗುಣಸಹಿತವಾದ ಶಬ್ದಾರ್ಥ
    (4) ಪದಸಮೂಹ

12. 'ಕಾವ್ಯಂ ಆನಂದಾಯ ಯಶಸೇ ಕಾಂತಾತುಲ್ಯತಯಾ ಉಪದೇಶಾಯ' ಇದನ್ನು ನಿರ್ದೇಶಿಸುತ್ತದೆ.
    (1) ಕಾವ್ಯ ಪ್ರಯೋಜನ
    (2) ಕವಿ ಸಮಯ
    (3) ರಸಾನುಭವ
    (4) ಕವಿತೆಯ ಪರಿಕರ

13. ಶಾಂತ ರಸದ ಸ್ಥಾಯೀಭಾವ ಇದು
    (1) ಶಮ
    (2) ಕ್ರೋಧ
    (3) ಉತ್ಸಾಹ
    (4) ಭಯ

14. ಶೋಕವೆಂಬ ಭಾವಕ್ಕೆ ನಾಟಕದಲ್ಲಿ ಮ್ಲಾನತೆ, ಕಂಬನಿ, ಗದ್ಗದ -ಇವುಗಳು
    (1) ಅನುಭಾವಗಳು
    (2) ಭಾವಗಳು
    (3) ವಿಭಾವಗಳು
    (4) ಸಂಶಯ ಯೋಗ

15. ಮಮ್ಮಟನ ಅಭಿಪ್ರಾಯದಂತೆ ವಾಚ್ಯಾರ್ಥವು ಉಪಪನ್ನವೆನಿಸುವುದಕ್ಕೆ ವ್ಯಂಗ್ಯದ ಸಹಾಯ ಅಗತ್ಯವಿದ್ದರೆ ಈ ಗುಣೀಭೂತ ವ್ಯಂಗ್ಯ
    (1) ಅಗೂಢ
    (2) ಅಪರಾಂಗ
    (3) ವಾಚ್ಯ ಸಿದ್ಧ್ಯಂಗ
    (4) ಸಂಧಿಗ್ಧ ಪ್ರಾಧಾನ್ಯ

16. 'ಔಚಿತ್ಯ'ದ ಚರ್ಚೆ ಭಾರತೀಯ ಅಲಂಕಾರಿಕರಲ್ಲಿ ಒಂದು ನಿರ್ದಿಷ್ಟರೂಪವನ್ನು ತಾಳಿದುದು
    (1) ಅಲಂಕಾರ ಪ್ರಸ್ಥಾನದಲ್ಲಿ
    (2) ರಸ ಪ್ರಸ್ಥಾನದಲ್ಲಿ
    (3) ರೀತಿ ಪ್ರಸ್ಥಾನದಲ್ಲಿ
    (4) ಧ್ವನಿ ಪ್ರಸ್ಥಾನದಲ್ಲಿ



Join Telegram https://t.me/edutubekannada

Downloaded from www.edutubekannada.com



17. ವಾಚ್ಯಾರ್ಥವು ಹೊಳೆಯುತ್ತಿದ್ದಂತೆಯೇ ವ್ಯಂಗ್ಯಾರ್ಥವೂ ಹೊಳೆಯುವ ಧ್ವನಿ ಪ್ರಭೇದವಿದು

(1) ಅನುರಣನ ಧ್ವನಿ

(2) ಅಸಂಲಕ್ಷ್ಯಕ್ರಮ ಧ್ವನಿ

(3) ಅರ್ಥಾಂತರ ಸಂಕ್ರಮಿತ ವಾಚ್ಯ ಧ್ವನಿ

(4) ಅತ್ಯಂತ ತಿರಸ್ಕೃತ ವಾಚ್ಯಧ್ವನಿ

18. "ಕಾವ್ಯ ಶಬ್ದೋಯಂ ಗುಣಾಲಂಕಾರ ಸಂಸ್ಕೃತಯೋ : ಶಬ್ದಾರ್ಥಯೋರ್ವರ್ತತೇ" ಕಾವ್ಯಸ್ವರೂಪ ಕುರಿತ ಈ ಹೇಳಿಕೆ ಇವರದು.

(1) ಭಾಮಹ

(2) ದಂಡಿ

(3) ಕುಂತಕ

(4) ವಾಮನ

19. 'ಗುಣ'ಗಳ ಬಗ್ಗೆ ಭಾಮಹನು ಹೇಳಿರುವ ಸರಿಯಾದ ಪಟ್ಟಿ

(1) ಶ್ಲೇಷೆ-ಪ್ರಸಾದ-ಸಮತೆ

(2) ಪ್ರಸಾದ-ಅರ್ಥವೃತ್ತಿ-ಓಜ

(3) ಮಾಧುರ್ಯ-ಪ್ರಸಾದ-ಓಜಸ್ಸು

(4) ಸುಕುಮಾರತೆ-ಸಮತೆ-ಪ್ರಸಾದ

20. ಕಾವ್ಯೋತ್ಪತ್ತಿಗೆ ಸಂಬಂಧಿಸಿದಂತೆ ಮಮ್ಮಟ ಹೇಳಿರುವ ಅಭಿಪ್ರಾಯದಲ್ಲಿ ಹೊರತಾದುದು.

(1) ಪ್ರತಿಭೆ

(2) ವ್ಯುತ್ಪತ್ತಿ

(3) ಸ್ವಭಾವೋಕ್ತಿ

(4) ಅಭ್ಯಾಸ

21. 'ಕಾಡ ತೊರೆಯ ಜಾಡು' ಇದು ಇವರ ಆತ್ಮಚರಿತ್ರೆಯ ಕೃತಿ

(1) ಕಡಿದಾಳು ಶಾಮಣ್ಣ

(2) ಬಿ.ವಿ. ಕಾರಂತ

(3) ಶಿವರಾಮಕಾರಂತ

(4) ಎಸ್.ಎಲ್. ಭೈರಪ್ಪ

22. 'ನೀಲಾಂಜನ' ಇದು ಇವರಿಗೆ ಅರ್ಪಿಸಿದ ಅಭಿನಂದನಾ ಗ್ರಂಥ

(1) ಚೆನ್ನವೀರ ಕಣವಿ

(2) ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ

(3) ಜಿ. ವೆಂಕಟಸುಬ್ಬಯ್ಯ

(4) ಹಂಪನಾ

23. ಈ ಅಕ್ಷರಗಳನ್ನು ಕಂಠೌಷ್ಠ್ಯ ವರ್ಣಗಳು ಎನ್ನುವರು

(1) ಎ, ಏ, ಐ

(2) ಒ, ಓ, ಔ

(3) ಐ, ಓ, ಔ

(4) ಏ, ಐ, ಔ



Join Telegram https://t.me/edutubekannada

Downloaded from www.edutubekannada.com



24. 'ಯತಿಯೆಂಬುದುಸಿ ರಾರ್ದಾಣಂ', ಎಂಬ ಅಭಿಪ್ರಾಯ ಇವರದು

(1) ಕೇಶಿರಾಜ

(2) ನಾಗಚಂದ್ರ

(3) ಭಟ್ಟಾಕಳಂಕ

(4) ನಾಗವರ್ಮ

25. 'ಮಗು ಮಲಗಿತು' ಇಲ್ಲಿರುವ ಲಿಂಗ

(1) ಪುಲ್ಲಿಂಗ

(2) ಸ್ತ್ರೀಲಿಂಗ

(3) ಪುನ್ನಂಪುಂಸಕ

(4) ನಪುಂಸಕಲಿಂಗ

26. 'ಮಳೆ ಬರಲು ಕೆರೆ ತುಂಬಿತು' ಈ ವಾಕ್ಯದಲ್ಲಿ ಗೆರೆ ಎಳೆದ ಪದವು

(1) ಕೃದಂತಾವ್ಯಯ

(2) ಕೃದಂತ ಭಾವನಾಮ

(3) ಕೃದಂತ ನಾಮ

(4) ತದ್ಧಿತಾಂತ ನಾಮ

27. 'ಮಮಿಂಕೆಯದದೊಳ್' ಎಂಬುವುದು ಇವುಗಳನ್ನು ತಿಳಿಸುತ್ತದೆ.

(1) ಅಕ್ಷರ ಗಣಗಳು

(2) ವಿಭಕ್ತಿ ಪ್ರತ್ಯಯಗಳು

(3) ಕೃತ್ ಪ್ರತ್ಯಯ

(4) ವಚನಗಳು

28. ಬೆಟ್ಟದ ತುತ್ತತುದಿಯನ್ನು ಏರಿ ನಿಂತೆವು. ಗೆರೆ ಎಳೆದ ಪದವು

(1) ಜೋಡಿನುಡಿ

(2) ಅನುಕರಣಾವ್ಯಯ

(3) ದ್ವಿರುಕ್ತಿ

(4) ಪಡೆನುಡಿ

29. ಡಿ.ಎಸ್. ಶಂಕರಭಟ್ಟ ರವರು ರಚಿಸಿದ ವ್ಯಾಕರಣ ಕೃತಿ

(1) ಛಂದೋಮಿತ್ರ

(2) ಕನ್ನಡ ಮಧ್ಯಮ ವ್ಯಾಕರಣ

(3) ಕನ್ನಡ ಛಂದೋಃ ವಿಕಾಸ

(4) ಕನ್ನಡಕೆ ಬೇಕು ಕನ್ನಡದ್ದೇ ವ್ಯಾಕರಣ

30. ವಿಕರಣ ಪ್ರತ್ಯಯಗಳು ಎಂದರೆ

(1) ಕಾಲಸೂಚಕ ಪ್ರತ್ಯಯಗಳು

(2) ವಿಭಕ್ತಿ ಪ್ರತ್ಯಯಗಳು

(3) ಅಖ್ಯಾತ ಪ್ರತ್ಯಯಗಳು

(4) ತದ್ಧಿತ ಪ್ರತ್ಯಯಗಳು

31. ವಿಭಕ್ತಿ ಪ್ರತ್ಯಯಗಳು ಸರ್ವನಾಮಗಳಿಗೆ ಹತ್ತುವುದಿಲ್ಲ

(1) ಉ, ಅನ್ನು

(2) ಇಂದ, ಗೆ

(3) ಏ, ಇರಾ

(4) ಕೆ, ದೆಸೆಯಿಂದ



Join Telegram https://t.me/edutubekannada

Downloaded from www.edutubekannada.com



32. ಎಲ್ಲಾ ದನಗಳು ಹೋದವು - ಈ ವಾಕ್ಯದಲ್ಲಿ ಗೆರೆ ಎಳೆದ ಪದ
(1) ಪುಲ್ಲಿಂಗ
(2) ಪುನ್ನಪುಂಸಕ ಲಿಂಗ
(3) ಸ್ತ್ರೀನಪುಂಸಕ ಲಿಂಗ
(4) ವಿಶೇಷ್ಯಾಧೀನ ಲಿಂಗ

33. ಮಚ್ಚರ ಪದದ ತತ್ಸಮ ರೂಪ
(1) ಮರ್ತ್ಯ
(2) ಮತ್ಸ್ಯ
(3) ಅಸೂಯೆ
(4) ಮತ್ಸರ

34. ಪ್ರಾಸಾಕ್ಷರವು ಹ್ರಸ್ವಸ್ವರವಾಗಿದ್ದರೆ, ಅದು
(1) ಸಿಂಹ ಪ್ರಾಸ
(2) ವೃಷಭ ಪ್ರಾಸ
(3) ಶರಭ ಪ್ರಾಸ
(4) ಹಯ ಪ್ರಾಸ

35. ವಿಷ್ಣುಗಣವು ಹೊಂದಿರುವ ಅಂಶಗಳು
(1) ಎರಡು
(2) ಎಂಟು
(3) ಮೂರು
(4) ನಾಲ್ಕು

36. ಈ ಕೆಳಗಿನ ಜೋಡಿಗಳಲ್ಲಿ ಸರಿಯಾದುದು
(1) ಭಟ್ಟಾಕಳಂಕ -ಶಬ್ದಾನುಶಾಸನ
(2) ಕೇಶಿರಾಜ -ರನ್ನಕಂದ
(3) Iನೇ ನಾಗವರ್ಮ-ಶಬ್ದಮಣಿದರ್ಪಣ
(4) IIನೇ ನಾಗವರ್ಮ -ಛಂದೋಂಬುಧಿ

37. 'ಬೆಂಬತ್ತು' 'ಹುಲಿದೊಗಲು' ಎಂಬ ಪದಗಳು ಈ ಸಂಧಿಗೆ ಉದಾಹರಣೆಯಾಗಿದೆ.
(1) ಗುಣಸಂಧಿ
(2) ಲೋಪಸಂಧಿ
(3) ಆದೇಶಸಂಧಿ
(4) ಆಗಮಸಂಧಿ

38. 'ಹಿಂದಲೆ' 'ಕಡೆಗಣ್ಣು' ಪದಗಳು ಈ ಸಮಾಸಕ್ಕೆ ಉದಾಹರಣೆಯಾಗಿವೆ.
(1) ತತ್ಪುರುಷ
(2) ಕರ್ಮಧಾರಯ
(3) ಅಂಶಿ
(4) ಗಮಕ

39. 'ಒಂದು ಕ್ರಿಯೆ ನಡೆದರೂ ನಡೆಯಬಹುದು' ಎಂಬ ಅರ್ಥವನ್ನು ಸೂಚಿಸುವ ಕ್ರಿಯಾರೂಪಗಳನ್ನು ಹೀಗೆನ್ನುವರು.
(1) ವಿಧ್ಯರ್ಥಕ ಕ್ರಿಯಾರೂಪ
(2) ಸಂಭಾವನಾರ್ಥಕ ಕ್ರಿಯಾರೂಪ
(3) ಪೂರ್ಣ ಕ್ರಿಯಾರೂಪ
(4) ನಿಷೇದಾರ್ಥಕ ಕ್ರಿಯಾರೂಪ

40. ದವಾಖಾನೆ, ಜಮೀನು, ಆಮದು ಈ ಪದಗಳು ಈ ಭಾಷೆಯಿಂದ ಕನ್ನಡಕ್ಕೆ ಬಂದಿವೆ.
(1) ಪರ್ಷಿಯನ್
(2) ಗ್ರೀಕ್
(3) ಪೋರ್ಚುಗೀಸ್
(4) ಹಿಂದೂಸ್ತಾನಿ



Join Telegram https://t.me/edutubekannada

Downloaded from www.edutubekannada.com



41. ಕ್ರಿಯಾಪದಗಳು ಪುರುಷ, ವಚನ ಮತ್ತು ಲಿಂಗ ಪ್ರತ್ಯಯಗಳನ್ನು ಹೊಂದಿದ್ದರೆ ಅದನ್ನು

(1) ಸಮಕ್ರಿಯಾಪದ

(2) ಅಸಮಕ್ರಿಯಾಪದ

(3) ಪೂರ್ಣಕ್ರಿಯಾಪದ

(4) ಅಪೂರ್ಣ ಕ್ರಿಯಾಪದ

42. ಭಾವಸೂಚಕಾವ್ಯಗಳ ಮುಂದೆ ಸ್ವರ ಬಂದರೆ

(1) ಲೋಪಸಂಧಿ

(2) ಯಕಾರಾಗಮಸಂಧಿ

(3) ಯಣ್ ಸಂಧಿ

(4) ಸಂಧಿಕಾರ್ಯವಾಗುವುದಿಲ್ಲ

43. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಬಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದನ್ನು ಹೀಗೆನ್ನುವರು.

(1) ಸಂಯೋಜಿತ ವಾಕ್ಯ

(2) ಸರಳ ವಾಕ್ಯ

(3) ಮಿಶ್ರವಾಕ್ಯ

(4) ಉಪವಾಕ್ಯ

44. ಕರ್ತೃವಿನ ಲಿಂಗ, ಪುರುಷ ಹಾಗೂ ವಚನಗಳನ್ನು ಸೂಚಿಸುವುದಕ್ಕಾಗಿ ಧಾತುವಿಗೆ ಸೇರುವ ಪ್ರತ್ಯಯಗಳನ್ನು ಹೀಗೆನ್ನುವರು.

(1) ವಿಭಕ್ತಿ ಪ್ರತ್ಯಯ

(2) ಅಖ್ಯಾತ ಪ್ರತ್ಯಯ

(3) ಕೃತ್ ಪ್ರತ್ಯಯ

(4) ಕಾಲಸೂಚಕ ಪ್ರತ್ಯಯ

45. 'ತ್ರಿಪದಿಯೇ ಕನ್ನಡ ವೃತ್ತಗಳ ಗಾಯಿತ್ರಿ' ಎಂದ ಕವಿ

(1) ಶಿವರಾಮಕಾರಂತ

(2) ಕುವೆಂಪು

(3) ದ.ರಾ. ಬೇಂದ್ರೆ

(4) ಪು.ತಿ. ನರಸಿಂಹಾಚಾರ್

46. 'ಆ ಕಲ್ಲು' ಇದು ಈ ಸಮಾಸಕ್ಕೆ ಉದಾಹರಣೆ

(1) ಗಮಕ

(2) ತತ್ಪುರುಷ

(3) ಕ್ರಿಯಾ

(4) ಬಹುವ್ರೀಹಿ

47. ಕೆಳಗಿನ ವೃತ್ತಗಳು ಮತ್ತು ಅವುಗಳ ಸೂತ್ರಕ್ಕೆ ಸಂಬಂಧಿಸಿದ I ಮತ್ತು II ನೇ ಪಟ್ಟಿಯನ್ನು ಹೊಂದಿಸಿ, ಸಂಕೇತಗಳಿಂದ ಆಯ್ಕೆ ಮಾಡಿರಿ.

| I | II |
|---|---|
| ಎ. ಉತ್ಪಲಮಾಲಾ ವೃತ್ತ | 1. ಮಂರಂಭನಂ ಮೂಯ ಗಣಮುಮದೆ |
| ಬಿ. ಚಂಪಕಮಾಲಾ ವೃತ್ತ | 2. ಭರಂ ನಭಭಂ ರಲಗಂ |
| ಸಿ. ಸ್ರಗ್ಧರಾವೃತ್ತ | 3. ಮಸಜಂ ಸತಂತಗಮುಮಾ |
| ಡಿ. ಶಾರ್ದೂಲ ವಿಕ್ರೀಡಿತ ವೃತ್ತ | 4. ನಜಭಜಜಂಜರಂ |

**ಸಂಕೇತಗಳು :**

| | ಎ | ಬಿ | ಸಿ | ಡಿ |
|---|---|---|---|---|
| (1) | 2 | 3 | 4 | 1 |
| (2) | 4 | 2 | 3 | 1 |
| (3) | 2 | 4 | 1 | 3 |
| (4) | 1 | 4 | 3 | 2 |



Join Telegram https://t.me/edutubekannada

Downloaded from www.edutubekannada.com



48. ವಾರ್ಧಕ ಷಟ್ಪದಿಯ ಗುಣ ವಿನ್ಯಾಸವು ಈ ರೀತಿಯಾಗಿರುತ್ತದೆ.
(1) ಐದೈದು ಮಾತ್ರೆಗಳಿಗೆ ಗಣವಿಭಾಗ
(2) ನಾಲ್ಕು ನಾಲ್ಕು ಮಾತ್ರೆಗಳಿಗೆ ಗಣವಿಭಾಗ
(3) ಮೂರು ಮಾತ್ರೆ, ನಾಲ್ಕು ಮಾತ್ರೆಗಳಿಗೆ ಗಣವಿಭಾಗ
(4) ಮೂರು ಮೂರು ಮಾತ್ರೆಗಳಿಗೆ ಗಣವಿಭಾಗ

49. 'ಮಟ್ಟ ರಗಳೆ' ಎಂಬ ಹೆಸರು ಈ ರಗಳೆ ಪ್ರಭೇದಕ್ಕಿದೆ.
(1) ಉತ್ಸಾಹ
(2) ಮಂದಾನಿಲ
(3) ಲಲಿತ
(4) ಸರಳ ರಗಳೆ

50. ಕೇಶಿರಾಜನ ಪ್ರಕಾರ ಕನ್ನಡದಲ್ಲಿ ಲಿಂಗಗಳ ಒಟ್ಟು ವಿಧಗಳು
(1) ಮೂರು
(2) ಆರು
(3) ಒಂಬತ್ತು
(4) ಏಳು

51. 'ಕೈಕಾಲು ಮೂಡಿತೋ ನಭಕೆ' ಈ ವಾಕ್ಯದಲ್ಲಿರುವ ಅಲಂಕಾರ
(1) ಉಪಮಾ
(2) ಉತ್ಪ್ರೇಕ್ಷೆ
(3) ಅರ್ಥಾಂತರನ್ಯಾಸ
(4) ದೃಷ್ಟಾಂತ

52. ಒಂದು ವ್ಯಂಜನವಾಗಿರಲಿ, ಎರಡು ವ್ಯಂಜನವಾಗಿರಲಿ ಪುನಃ ಪುನಃ ಹೇಳಲ್ಪಟ್ಟರೆ ಅದನ್ನು ಹೀಗೆನ್ನುವರು.
(1) ವೃತ್ತನುಪ್ರಾಸ
(2) ಯಮಕ
(3) ಚಿತ್ರಕವಿತ್ವ
(4) ಛೇಕಾನುಪ್ರಾಸ

53. 'ಅರ್ಥಾಂತರನ್ಯಾಸಾ ಪ್ರಿಯ' ಎಂದು ಕರೆಯಲ್ಪಡುವವನು.
(1) ಲಕ್ಷ್ಮೀಶ
(2) ಹರಿಹರ
(3) ನಾಗಚಂದ್ರ
(4) ಕುಮಾರವ್ಯಾಸ

54. 'ಮಾರಿಗೌತಣವಾಯ್ತು ನಾಳಿನ ಭಾರತವು' ಈ ವಾಕ್ಯದಲ್ಲಿರುವ ಅಲಂಕಾರ
(1) ಉಪಮಾಲಂಕಾರ
(2) ಶ್ಲೇಷೆ
(3) ದೃಷ್ಟಾಂತ
(4) ರೂಪಕ

55. ಕೌಂತೇಯ ಪದವು ಈ ಅಕ್ಷರಗಣವಾಗಿದೆ
(1) ಯಗಣ
(2) ತಗಣ
(3) ನಗಣ
(4) ರಗಣ



Join Telegram https://t.me/edutubekannada

Downloaded from www.edutubekannada.com



56. 'ಊರು ಉಪಕಾರ ಅರಿಯದು : ಹೆಣ ಶೃಂಗಾರ ಅರಿಯದು'. ಈ ವಾಕ್ಯದ ಅಲಂಕಾರ
(1) ಉತ್ಪ್ರೇಕ್ಷಾಲಂಕಾರ
(2) ರೂಪಕಾಲಂಕಾರ
(3) ಅರ್ಥಾಂತರನ್ಯಾಸಾಲಂಕಾರ
(4) ದೃಷ್ಟಾಂತಾಲಂಕಾರ

57. ಕವಿಯು ಯಾವ ವಸ್ತುವನ್ನು ಕುರಿತು ವರ್ಣಿಸುತ್ತಾನೆಯೋ ಅದನ್ನು ಹೀಗೆನ್ನುವರು
(1) ಅವರ್ಣ್ಯ
(2) ಸಮಾನಧರ್ಮ
(3) ವರ್ಣ್ಯ
(4) ಉಪಮಾವಾಚಕ

58. ಭಾಷೆಯ ಉಗಮ, ವಿಕಾಸದ ಬಗ್ಗೆ ವಂಶವೃಕ್ಷ ಸಿದ್ಧಾಂತವು ಪ್ರತಿಪಾದಿಸಿರುವ ಅಂಶ
(1) ಪ್ರತಿಯೊಂದು ಭಾಷೆಯು ಪ್ರತ್ಯೇಕ ಗುಣಹೊಂದಿ ಬೆಳೆದಿದೆ.
(2) ಜಗತ್ತಿನ ಭಾಷೆಗಳು ಬೇರೆ ಭಾಷೆಯೊಂದಿಗೆ ಸಂಬಂಧವಿಲ್ಲದೆ ಹುಟ್ಟಿಬಂದಿವೆ.
(3) ಆದಿಯಲ್ಲಿ ಒಂದೇ ಭಾಷೆಯಿಂದ ಹಲವು ಭಾಷೆಗಳು ಹುಟ್ಟಿಬಂದಿವೆ.
(4) ಎಲ್ಲಾ ಭಾಷೆಗಳು ಅನುವಂಶೀಯ ಹಿನ್ನೆಲೆಯಿಂದ ಹುಟ್ಟಿ ಬೆಳೆದಿವೆ.

59. ಭಾಷೆಯ ಸ್ವರೂಪಕ್ಕೆ ಸರಿಹೊಂದದ ಲಕ್ಷಣ
(1) ಭಾಷೆ ಅನುವಂಶಿಕವಾಗಿ ಬರುವಂತಹದು
(2) ಭಾಷೆ ಭಾವನಾರೂಪಕ ಮತ್ತು ಭಾವನಾವಾಹಕ
(3) ಭಾಷೆ ಧ್ವನಿ ಸಂಕೇತಗಳ ಅರ್ಥಬದ್ಧ ವ್ಯವಸ್ಥೆ
(4) ಭಾಷೆ ಮನಸ್ಸಿನ ಸ್ಥಿತಿಯನ್ನು ಅಭಿವ್ಯಕ್ತಿಸುವ ಸಾಧನ

60. ಉತ್ತಮ ಆಲಿಸುವಿಕೆಯಲ್ಲಿ ಸಾಧಿಸಬೇಕಾದ ಅತಿಮುಖ್ಯ ಅಂಶ
(1) ಕಣ್ಣುಮುಚ್ಚಿ ಅಂತರ್ಮುಖಿಯಾಗಿ ಕೇಳುವುದು
(2) ಆಲಿಸುತ್ತಾ ವಿಷಯಗಳನ್ನು ಮೌಲ್ಯ-ಮಾಪನ ಮಾಡುವುದು
(3) ಆಲಿಸುತ್ತಾ ಕಲ್ಪನಾ ಲೋಕದಲ್ಲಿ ಮುಳುಗುವುದು
(4) ಉದ್ದೇಶಪೂರ್ವಕವಾಗಿ, ಧ್ವನಿ ಏರಿಳಿತಗಳನ್ನು ಗಮನಿಸಿ ಆಲಿಸುವುದು

61. ಭಾಷಾ ಕೌಶಲಗಳ ಬೋಧನಾ ಪ್ರಕ್ರಿಯೆಯಲ್ಲಿ ಅಸಿಂಧುವೆನಿಸುವ ಅಂಶ
(1) ಉತ್ತಮ ಭಾಷಾ ಪ್ರಯೋಗದ ಅನುಕರಣೆ ಮೂಲಕ ಕಲಿಸುವುದು
(2) ಭಾಷಾ ಕೌಶಲಗಳನ್ನು ಸಮಗ್ರತೆ ಹಾಗೂ ಸುರಳಿ ಕ್ರಮದಲ್ಲಿ ಕಲಿಸುವುದು
(3) ಪ್ರತಿ ಅಕ್ಷರವನ್ನು ಪದೇಪದೆ ತಿದ್ದಿಸಿ ಪರಿಣಿತಿ ಬೆಳೆಸುವುದು
(4) ಭಾಷಾ ಕಲಿಕೆಗೆ ಮನೆ ಮತ್ತು ಸಾಮಾಜಿಕ ಪರಿಸರವನ್ನು ಬಳಸಿಕೊಳ್ಳುವುದು



Join Telegram https://t.me/edutubekannada

Downloaded from www.edutubekannada.com



62. ಮಕ್ಕಳ ಶಾಬ್ದಿಕ ಭಾಷೆಯ ಬೆಳವಣಿಗೆ ಪ್ರಕ್ರಿಯೆಯಲ್ಲಿ ಅತ್ಯಂತ ಹೆಚ್ಚು ಪ್ರಭಾವ ಬೀರುವ ಅಂಶ
(1) ಸಮವಯಸ್ಕರೊಡನೆ ವಿಚಾರ ವಿನಿಮಯ
(2) ದಿನಪತ್ರಿಕೆಗಳ ವಾಚನ
(3) ನಿಯತ ಕಾಲಿಕೆಗಳ ವಾಚನ
(4) ಮಕ್ಕಳ ಅನುವಂಶಿಕ ಹಿನ್ನೆಲೆ

63. ಕೈಬರಹದಲ್ಲಿ ಕಂಡುಬರುವ ವ್ಯಾಕರಣ ದೋಷಗಳಿಗೆ ಮುಖ್ಯ ಕಾರಣ
(1) ಮಾತು ಮತ್ತು ಓದಿನಲ್ಲಿ ಕಂಡುಬರುವ ದೋಷಗಳು
(2) ಸುಂದರ ಕೈಬರಹಕ್ಕೆ ಉತ್ತೇಜನದ ಕೊರತೆ
(3) ಆಂಗ್ಲಮಾಧ್ಯಮದಲ್ಲಿ ಬೋಧನೆ
(4) ಪದ ಮತ್ತು ವಾಕ್ಯರಚನಾ ಅಭ್ಯಾಸಗಳ ಕೊರತೆ

64. ಉತ್ತಮ ರೀತಿಯ ಮೌನವಾಚನದಲ್ಲಿ ಒಳಗೊಳ್ಳದ ಅಂಶ
(1) ಆಸಕ್ತಿಯಿಂದ ಉದ್ದೇಶಪೂರ್ವಕವಾಗಿ ಓದುವುದು
(2) ಪದೇಪದೇ ಓದಿ ಕಂಠಪಾಠ ಮಾಡುವುದು
(3) ಮೌನವಾಗಿ ಇಡಿಯಾಗಿ ಓದಿ ಗ್ರಹಿಸುವುದು
(4) ಅರ್ಥಗ್ರಹಿಸುತ್ತಾ ಏಕಾಗ್ರತೆಯಿಂದ ಓದುವುದು

65. ಪಾಠಬೋಧನಾ ಸಂದರ್ಭಗಳಲ್ಲಿ ಸೂಚನೆಗಳನ್ನು ನೀಡುವ ಮುಖ್ಯ ಉದ್ದೇಶ
(1) ತರಗತಿಯಲ್ಲಿ ಅಶಿಸ್ತು, ಗದ್ದಲಗಳನ್ನು ನಿಯಂತ್ರಿಸಲು
(2) ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಯನ್ನು ಬೋಧಪ್ರದವಾಗಿ ಮುಂದುವರಿಸಲು
(3) ಕಲಿಕೆಯನ್ನು ನಿರಂತರ ಮೌಲ್ಯಮಾಪನ ಮಾಡಲು
(4) ಕಲಿಕೆಯ ಮೌಲ್ಯಮಾಪನ ಮತ್ತು ಪರಿಹಾರ ಚಟುವಟಿಕೆಗಳನ್ನು ಮಾಡಲು

66. ಭಾಷಾ ಕೌಶಲಗಳ ಕಲಿಕೆಯಲ್ಲಿ ಬಳಸಬಹುದಾದ ಸ್ವಯಂ ಬೋಧಿನಿ ಸಾಧನ
(1) ಪಠ್ಯ ಪುಸ್ತಕ
(2) ಸಂಪನ್ಮೂಲ ಪುಸ್ತಕ
(3) ಕಾಪಿ ಪುಸ್ತಕ
(4) ಅಭ್ಯಾಸ ಪುಸ್ತಕ

67. ತರಗತಿಗಳಲ್ಲಿ ದ್ವಿಭಾಷೆಯನ್ನು ಬಳಸುವುದರಿಂದ
(1) ಭಾಷಾ ಕಲಿಕೆ ಹಾಗೂ ಪ್ರಯೋಗ ಉತ್ತಮಗೊಳ್ಳುತ್ತದೆ.
(2) ಪಠ್ಯಕಲಿಕೆಗೆ ಅಡ್ಡಿಯುಂಟಾಗುತ್ತದೆ
(3) ಒಂದೇ ಅಧಿಕೃತ ಭಾಷೆಯನ್ನು ಮಾತ್ರ ಬಳಸಬೇಕು.
(4) ಯಾವ ಭಾಷೆಯಲ್ಲೂ ಪ್ರಭುತ್ವ ಸಾಧಿಸುವುದಿಲ್ಲ



Join Telegram https://t.me/edutubekannada

Downloaded from www.edutubekannada.com



68. ಪದ್ಯ ಬೋಧನೆಯಲ್ಲಿ ರಸಾನುಭವವನ್ನು ಮೌಲ್ಯಮಾಪನ ಮಾಡುವ ಬಗೆ

(1) ಪದ್ಯದ ಕಂಠಪಾಠವನ್ನು ಒಪ್ಪಿಸಿಕೊಳ್ಳುವುದು

(2) ಪದ್ಯದ ಬಗೆಗೆ ವಸ್ತುನಿಷ್ಠ ಪ್ರಶ್ನೆಗಳನ್ನು ಕೇಳುವುದು

(3) ಪದ್ಯದ ಸಾರವನ್ನು ಕುರಿತು ವಿವರಣೆ ಕೇಳುವುದು

(4) ಪದ್ಯದಲ್ಲಿನ ಭಾಷಾಂಶಗಳ ಅಭ್ಯಾಸ ಮಾಡಿಸುವುದು

69. ಭಾವಪೂರ್ಣ ಅಭಿವ್ಯಕ್ತಿಯನ್ನು ಪೋಷಿಸುವ ಚಟುವಟಿಕೆ

(1) ಪುಟಾಣಿ ಭಾಷಣ

(2) ಪಾತ್ರಾಭಿನಯ

(3) ಚರ್ಚಾಸ್ಪರ್ಧೆ

(4) ಹರಟೆ

70. ವಿದ್ಯಾರ್ಥಿಯೊಬ್ಬನ ಉಚ್ಚಾರ ಹಾಗೂ ಧ್ವನಿ ಏರಿಳಿತಗಳಲ್ಲಿನ ದೋಷಗಳ ಪರಿಹಾರಕ್ಕೆ ಬಳಸಬಹುದಾದ ವಿಶಿಷ್ಟಸಾಧನ

(1) ಧ್ವನಿ ಮುದ್ರಣ

(2) ಕ್ರಿಯಾ ಸಂಶೋಧನೆ

(3) ಭಾಷಾ ಕೊಠಡಿ

(4) ಭಾಷಾ ಪ್ರಯೋಗಾಲಯ

71. ಭಾಷಾ ಪಾಠ ಯೋಜನೆಯಲ್ಲಿ ಗಮನಿಸ-ಬೇಕಾದ ಅತಿಮುಖ್ಯ ಅಂಶ

(1) ಲಭ್ಯವಿರುವ ಕಾಲಕ್ಕೆ ಅಗತ್ಯ ಪಠ್ಯ ವಿಷಯಗಳನ್ನು ಆಯ್ಕೆಮಾಡುವುದು

(2) ಆಯ್ದ ಪಠ್ಯದ ಬೋಧನಾಂಶಗಳನ್ನು ಕ್ರಮಬದ್ಧವಾಗಿ ಪಟ್ಟಿಮಾಡುವುದು

(3) ಉದ್ದೇಶ ಸಾಧನೆಗೆ ಯುಕ್ತ ರಚನಾತ್ಮಕ ಚಟುವಟಿಕೆಗಳನ್ನು ಒದಗಿಸುವುದು

(4) ಅಂದಿನ ಪಠ್ಯಗಳಿಗೆ ಸೂಕ್ತ ಮನೆ-ಗೆಲಸ ರೂಪಿಸಿ ಸೇರ್ಪಡಿಸುವುದು

72. ತರಗತಿಗಳಲ್ಲಿ ಬಹುಭಾಷಾ ಬಳಕೆಯು ಬೀರುವ ಪರಿಣಾಮ

(1) ಮಕ್ಕಳ ಸಂವಹನ ಅವಕಾಶಗಳನ್ನು ಕಸಿಯುತ್ತದೆ.

(2) ಮಾತೃಭಾಷೆಯ ಕಲಿಕೆಗೆ ದೊಡ್ಡ ತಡೆಯಾಗುತ್ತದೆ.

(3) ಮಕ್ಕಳ ನಡುವಿನ ಅಂತರ್ ಸಂಬಂಧಗಳು ದುರ್ಬಲಗೊಳ್ಳುತ್ತವೆ.

(4) ಭಾಷಾ ಸಾಮರಸ್ಯವನ್ನು ಮೂಡಿಸುತ್ತವೆ.

73. ಕ್ರಿಯಾ ಸಂಶೋಧನೆಯಲ್ಲಿನ ಪೂರ್ವ ಮತ್ತು ಉತ್ತರ ಪರೀಕ್ಷೆಗಳು ಕ್ರಮವಾಗಿ ಈ ಉದ್ದೇಶ ಹೊಂದಿರುತ್ತವೆ.

(1) ನೈದಾನಿಕ ಮತ್ತು ಸಾಫಲ್ಯತೆ

(2) ನೈದಾನಿಕ ಮತ್ತು ನೈದಾನಿಕ

(3) ಸಾಧನಾ ಮತ್ತು ನೈದಾನಿಕ

(4) ಪ್ರೇರಣ ಮತ್ತು ನೈದಾನಿಕ





Join Telegram https://t.me/edutubekannada

Downloaded from www.edutubekannada.com



74. ಮೌಲ್ಯಮಾಪನದಲ್ಲಿ ವ್ಯಾಪಕತೆ ಗುಣವನ್ನು ಪ್ರತಿಬಿಂಬಿಸುವ ಅಂಶ

(1) ಪಠ್ಯವಿಷಯಗಳ ಕಲಿಕೆಯನ್ನು ಆಳವಾಗಿ ಪರೀಕ್ಷಿಸುವುದು.

(2) ತರಗತಿಯ ಎಲ್ಲಾ ಮಕ್ಕಳ ಕಲಿಕೆಯನ್ನು ಸಾರಸಂಗ್ರಹಿಸಿ ಪರೀಕ್ಷಿಸುವುದು.

(3) ವಿದ್ಯಾರ್ಥಿಗಳ ಪಠ್ಯಕಲಿಕೆಯಲ್ಲಿನ ದೋಷಗಳನ್ನು ಪತ್ತೆಹಚ್ಚುವುದು.

(4) ಪಠ್ಯ ಹಾಗೂ ಸಹಪಠ್ಯ ಕ್ಷೇತ್ರಗಳಲ್ಲಿನ ಸಾಮರ್ಥ್ಯಗಳನ್ನು ಮೌಲೀಕರಿಸುವುದು

75. ಪಠ್ಯಾಧಾರಿತ ಚರ್ಚೆಯಲ್ಲಿ ವಿದ್ಯಾರ್ಥಿಯು ಪ್ರದರ್ಶಿಸುವ ಉತ್ತಮ ಅಭಿವ್ಯಕ್ತಿಗೆ ಇದು ಆಧಾರವಾಗಿರುತ್ತದೆ.

(1) ಬುದ್ಧಿಶಕ್ತಿ ಮತ್ತು ಅಂತರ್ಮುಕಿತ್ವ

(2) ಶಿಕ್ಷಕರ ಪ್ರಬುದ್ಧ ರೀತಿಯ ಬೋಧನಾ ಸಾಮರ್ಥ್ಯ

(3) ಮನೆ ಹಾಗೂ ಸಮವಯಸ್ಕರ ಪ್ರಭಾವ

(4) ಓದಿಗ್ರಹಿಸುವ ಮತ್ತು ನಿರೂಪಿಸುವ ಕೌಶಲ

76. "ವಿದ್ಯಾರ್ಥಿಗಳ ಸಮಗ್ರ ಶೈಕ್ಷಣಿಕ ಸಾಧನೆಯನ್ನು ಉತ್ತೇಜಿಸುವಲ್ಲಿ ಭಾಷಾ ಶಿಕ್ಷಕರಿಗೆ ಹೆಚ್ಚು ಅವಕಾಶಗಳಿರುತ್ತವೆ". ಈ ಹೇಳಿಕೆ ಧ್ವನಿಸುವ ಅರ್ಥ

(1) ಭಾಷಾ ಶಿಕ್ಷಕ ಬೆಳೆಸುವ ಭಾಷಾ ಪ್ರಭುತ್ವವು ಇತರೆಲ್ಲಾ ವಿಷಯಗಳ ಕಲಿಕೆಗೆ ನೆರವಾಗುತ್ತವೆ.

(2) ಭಾಷಾ ಬೋಧನೆಗೆ ಹೆಚ್ಚು ಸಮಯವಿದ್ದು ಇತರ ವಿಷಯಗಳ ಕಲಿಕೆಯನ್ನು ಅನುಕೂಲಿಸಬಹುದು.

(3) ಭಾಷಾ ಕಲಿಕೆ ಅತ್ಯಂತ ಸಹಜವಾಗಿದ್ದು ಸ್ವಯಂ ಶೀಘ್ರವಾಗಿ ಕಲಿಯುತ್ತಾರೆ.

(4) ಭಾಷಾ ಶಿಕ್ಷಕರು ಎಲ್ಲಾ ಮಕ್ಕಳೊಂದಿಗೆ ನಿಕಟ ಬಾಂಧವ್ಯ ಹೊಂದಿರುತ್ತಾರೆ.

77. ಭಾಷಾ ಬೋಧನಾ ಸಂದರ್ಭದಲ್ಲಿ ಭಾಷಾ ಕಲಿಕೆಯನ್ನು ಅನುಕೂಲಿಸುವ ಉತ್ತಮ ವಿಧಾನ

(1) ಭಾಷಾ ಪಠ್ಯಗಳ ಬಗೆಗೆ ಆಯಾ ದಿನವೇ ಸಿದ್ಧಗೊಳಿಸಿ ಒಪ್ಪಿಸಿಕೊಳ್ಳುವುದು.

(2) ಭಾಷಾ ದೋಷಗಳನ್ನು ತಿದ್ದದೆ ಬಳಕೆಯನ್ನು ಉತ್ತೇಜಿಸುವುದು.

(3) ಭಾಷಾ ದೋಷಗಳನ್ನು ಗುರ್ತಿಸಿ ಮರುಬೋಧನೆ ಮಾಡುವುದು.

(4) ಭಾಷಾ ದೋಷಗಳಿಗೆ ಪರಿಹಾರ, ಉತ್ತಮಾಂಶಗಳಿಗೆ ಪುಷ್ಠೀಕರಣ ನೀಡುವುದು.



Join Telegram https://t.me/edutubekannada

Downloaded from www.edutubekannada.com



78. ಕನ್ನಡದ ಪ್ರಾಚೀನತೆಗೆ ಸಂಬಂಧಿಸಿದಂತೆ 'ಶಿಲಪ್ಪದಿಗಾರಂ' ಎಂಬ ತಮಿಳು ಕೃತಿಯಲ್ಲಿ ಲಭ್ಯವಾಗಿರುವುದು.
(1) ಕನ್ನಡ ಛಂದೋರೂಪ
(2) ಕನ್ನಡ ಜಾನಪದ ಕುಣಿತದ ಹಾಡು
(3) ಕನ್ನಡ ನಾಡಿನ ಗಡಿ
(4) ಕನ್ನಡ ನಾಡಿನ ಪ್ರಸಿದ್ಧ ನಗರ-ಬಂದರುಗಳು

79. 'ಅಪ್ಪೊಂ' ಎಂಬುದು ಈ ಕನ್ನಡದ ರೂಪ
(1) ಹೊಸಗನ್ನಡ
(2) ನಡುಗನ್ನಡ
(3) ಹಳಗನ್ನಡ
(4) ಪೂರ್ವ ಹಳಗನ್ನಡ

80. ಕವಿರಾಜಮಾರ್ಗಕಾರ 'ಕುದಿಯುವ ಹಾಲಿಗೆ ಮಜ್ಜಿಗೆಯ ತೊಟ್ಟುಗಳನ್ನು ಬೆರೆಸಿದ ಹಾಗೆ' ಎಂದು ಅಲ್ಲಗಳೆದುದು
(1) ಅರಿಸಮಾಸ ಪ್ರಯೋಗವನ್ನು
(2) ಅರ್ಥ ಸಾರೂಪ್ಯವಿಲ್ಲದ ಬರಹವನ್ನು
(3) ಶಬ್ದ ಸಾರೂಪ್ಯವಿಲ್ಲದ ಬರಹವನ್ನು
(4) ಅಂತ್ಯ ಲಘುವುಳ್ಳ ಪದದೊಡನೆ ಒತ್ತಕ್ಷರ ಸೇರಿಸುವುದನ್ನು

81. 'ಪೊಗಳೆ ಪೊಟ್ಟಣ' ಎಂಬ ಕರ್ಮಣಿ ರೂಪವಿರುವ ಶಿಲಾಲೇಖ
(1) ಶ್ರವಣಬೆಳಗೊಳ ಶಿಲಾಲೇಖ
(2) ಹಲ್ಮಿಡಿ ಶಿಲಾಲೇಖ
(3) ಬಾದಾಮಿ ಶಿಲಾಲೇಖ
(4) ತಮಟಕಲ್ಲು ಶಿಲಾಲೇಖ

82. ತೀ.ತಾ. ಶರ್ಮರವರು ವಿವೇಚಿಸಿದ ಕನ್ನಡ ಸಾಹಿತ್ಯ ಚರಿತ್ರೆಯ ವಿಭಾಗಕ್ರಮ
(1) ಆರಂಭಕಾಲ-ಮತಪ್ರಾಬಲ್ಯಕಾಲ-ನವೀನಕಾಲ
(2) ಪಂಪಪೂರ್ವಯುಗ-ಪಂಪಯುಗ-ಬಸವಯುಗ-ಕುಮಾರವ್ಯಾಸ ಯುಗ
(3) ಜೈನಯುಗ-ವೀರಶೈವಯುಗ-ಬ್ರಾಹ್ಮಣಯುಗ
(4) ಕ್ಷಾತ್ರಯುಗ-ಮತಪ್ರಚಾರಯುಗ-ಸಾರ್ವಜನಿಕಯುಗ-ಆಧುನಿಕಯುಗ

83. ಪಂಪನ 'ಆದಿಪುರಾಣ'ವು ಈ ಕೃತಿಗೆ ಋಣಿಯಾಗಿದೆ.
(1) ವಡ್ಡಾರಾಧನೆ
(2) ಪೂರ್ವಪುರಾಣ
(3) ಚಂದ್ರಪ್ರಭ ಪುರಾಣ
(4) ಹರಿವಂಶ

84. ಕೆಳಗಿನ ಕೃತಿ ಮತ್ತು ಅವುಗಳ ಸ್ವರೂಪಕ್ಕೆ ಸಂಬಂಧಿಸಿದಂತೆ I ಮತ್ತು II ನೇ ಪಟ್ಟಿ ಹೊಂದಿಸಿ, ಸರಿಯಾದ ಹೊಂದಿಕೆಯನ್ನು ಸಂಕೇತಗಳಿಂದ ಗುರ್ತಿಸಿ.

| I | II |
|---|---|
| ಎ. ಹದಿಬದೆಯ ಧರ್ಮ | 1. ಗದ್ಯ |
| ಬಿ. ಮಿತ್ರಾವಿಂದ ಗೋವಿಂದ | 2. ಚಂಪೂ |
| ಸಿ. ರಾಮಾಶ್ವಮೇಧ | 3. ಸಾಂಗತ್ಯ |
| ಡಿ. ರಾಜಶೇಖರ ವಿಲಾಸ | 4. ನಾಟಕ |

**ಸಂಕೇತಗಳು :**

| | ಎ | ಬಿ | ಸಿ | ಡಿ |
|---|---|---|---|---|
| (1) | 1 | 2 | 4 | 3 |
| (2) | 4 | 3 | 2 | 1 |
| (3) | 3 | 4 | 1 | 2 |
| (4) | 2 | 1 | 4 | 3 |



Join Telegram https://t.me/edutubekannada

Downloaded from www.edutubekannada.com



**85.** 'ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ' ಈ ಕೀರ್ತನೆಯ ಸಾಲು ಇವರದು.

(1) ಕನಕದಾಸ

(2) ವ್ಯಾಸರಾಯ

(3) ಪುರಂದರದಾಸ

(4) ಶ್ರೀಪಾದರಾಜ

**86.** ಚಾವುಂಡರಾಯನ 'ತ್ರಿಷಷ್ಟಿ ಲಕ್ಷಣ ಮಹಾಪುರಾಣ' ದ ಸ್ವರೂಪ

(1) ಷಟ್ಪದಿ ಕಾವ್ಯ

(2) ರಗಳೆ ಕಾವ್ಯ

(3) ಚಂಪೂ ಕಾವ್ಯ

(4) ಗದ್ಯ ಗ್ರಂಥ

**87.** 'ಅಭಯರುಚಿ - ಅಭಯಮತಿ' ಚಿತ್ರಣವಿರುವ ಜನ್ನನ ಕೃತಿ

(1) ಅನಂತನಾಥ ಪುರಾಣ

(2) ಅನುಭವ ಮುಕುರ

(3) ಯಶೋಧರ ಚರಿತೆ

(4) ಪೂರ್ವ ಪುರಾಣ

**88.** 'ಕಣ್ಣರಿಯದಿರ್ದಡೇ ಕರುಳರಿಯದೇ' ಎಂಬ ಪ್ರಸಿದ್ಧ ವಾಕ್ಯವು ಈ ಕೃತಿಯಲ್ಲಿ ಕಂಡುಬರುತ್ತದೆ.

(1) ಕರ್ನಾಟ ಭಾರತ ಕಥಾಮಂಜರಿ

(2) ವಿಕ್ರಮಾರ್ಜುನ ವಿಜಯಂ

(3) ಸಾಹಸ ಭೀಮ ವಿಜಯ

(4) ಜೈಮಿನಿ ಭಾರತ

**89.** ಹೇರಳವಾಗಿ ವೀರಶೈವ ಶರಣರ ಕಾವ್ಯಾತ್ಮ ಚರಿತೆಗಳನ್ನು ಬರೆದ ಶಿವಕವಿ

(1) ಚಾಮರಸ

(2) ಹರಿಹರ

(3) ಭೀಮಕವಿ

(4) ಪದ್ಮರಸ

**90.** ವಚನಗಳ ರಚನೆಯಲ್ಲಿ ಅಭಿನಂದನಾರ್ಹನಾದ ಗುಜರಾತಿ ಮೂಲದ ವಚನಕಾರ

(1) ಸಿದ್ಧರಾಮ

(2) ಆದಯ್ಯ

(3) ಅಜಗಣ್ಣ

(4) ಹಡಪದ ಅಪ್ಪಣ್ಣ

**91.** ಅಕ್ಕಮಹಾದೇವಿ ವಿರಚಿತ 'ಯೋಗಾಂಗ ತ್ರಿಪದಿ' ಕೃತಿಯಲ್ಲಿ ಕಂಡು ಬರುವುದು.

(1) ಅರವತ್ತೇಳು ತ್ರಿಪದಿಗಳು

(2) ಅರವತ್ತೇಳು ಕಂದಪದ್ಯಗಳು

(3) ಅರವತ್ತೇಳು ಸ್ವರವಚನಗಳು

(4) ಅರವತ್ತೇಳು ಸ್ತೋತ್ರಗಳು

**92.** ಮುದ್ದಣ ಕವಿಯ ಅಪೂರ್ವವಾಗಿ ಉಳಿದ ಕಾದಂಬರಿ

(1) ರತ್ನಾವತಿ ಕಲ್ಯಾಣ

(2) ಕುಮಾರ ವಿಜಯ

(3) ಗೋದಾವರಿ

(4) ನಂದಳಿಕೆ



Join Telegram https://t.me/edutubekannada

Downloaded from www.edutubekannada.com



93. 'ದರ್ಶನ ವಿಮರ್ಶೆ' ಎಂಬುವುದು ಇವರ ಪರಿಕಲ್ಪನೆ
(1) ಕೀರ್ತಿನಾಥ ಕುರ್ತಕೋಟಿ
(2) ಕೆ.ವಿ. ಪುಟ್ಟಪ್ಪ
(3) ಗಿರಡ್ಡಿ ಗೋವಿಂದರಾಜ
(4) ಜಿ.ಎಸ್. ಆಮೂರ

94. 'ಮಾಯಿಯ ಮೂರು ಮುಖಗಳು' ಕವನ ಸಂಕಲನದ ಕರ್ತೃ
(1) ಸು.ರಂ. ಎಕ್ಕುಂಡಿ
(2) ಗಂಗಾಧರ ಚಿತ್ತಾಲ
(3) ಶಂಕರಮಾಕಾಶಿ ಪುಣೇಕರ
(4) ಶ್ರೀನಿವಾಸ

95. 'ಭೂಮಿಗೆ ಬಿದ್ದ ಬೀಜ, ಎದೆಗೆ ಬಿದ್ದ ಅಕ್ಷರ ಇಂದಲ್ಲ ನಾಳೆ ಫಲ ಕೊಡುವುದು' ಈ ಹೇಳಿಕೆಯನ್ನು ದೇವನೂರು ಮಹದೇವ ಬರೆದಿರುವುದು
(1) ದಲಿತ ಚಳವಳಿಗಾಗಿ
(2) ಮಾತೃಭಾಷಾ ಅಭಿಯಾನಕ್ಕಾಗಿ
(3) ಸಾಕ್ಷರತೆಗಾಗಿ
(4) ಪರಿಸರ ಚಳವಳಿಗಾಗಿ

96. ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಪುರಸ್ಕೃತ ಡಿ.ವಿ.ಜಿ. ರವರ ಕೃತಿ
(1) ಶ್ರೀಮದ್ಭಗವದ್ಗೀತಾ ತಾತ್ಪರ್ಯ
(2) ಉಮರನ ಒಸಗೆ
(3) ಜ್ಞಾಪಕ ಚಿತ್ರಶಾಲೆ
(4) ಮಂಕುತಿಮ್ಮನ ಕಗ್ಗ

97. ಯು.ಆರ್. ಅನಂತಮೂರ್ತಿ ರಚಿಸಿದ ಕೊನೆಯ ಕೃತಿ
(1) ವಾಲ್ಮೀಕಿಯ ನೆವದಲ್ಲಿ
(2) ಮಾತು ಸೋತ ಭಾರತ
(3) ಎಂದೆಂದೂ ಮುಗಿಯದ ಕತೆ
(4) ಹಿಂದುತ್ವ ಅಥವಾ ಹಿಂದ್ ಸ್ವರಾಜ್

98. 'ಆ ಬೆಟ್ಟದಲ್ಲಿ ಬೆಳದಿಂಗಳಲ್ಲಿ ಸುಳಿದಾಡಬೇಡ ಗೆಳತಿ' ಎಂಬ ಗೀತೆಯನ್ನು ರಚಿಸಿದವರು
(1) ಕೆ.ಎಸ್. ನಿಸಾರ್ ಅಹಮದ್
(2) ಸಿದ್ಧಲಿಂಗಯ್ಯ
(3) ಜಯಂತ ಕಾಯ್ಕಿಣಿ
(4) ಎಚ್.ಎಸ್. ವೆಂಕಟೇಶಮೂರ್ತಿ

99. ಮ.ನ. ಜವರಯ್ಯನವರ 'ಮಾಗಿ' ಕೃತಿಯು ಈ ಸಾಹಿತ್ಯ ಪ್ರಕಾರದಲ್ಲಿದೆ.
(1) ಕಾದಂಬರಿ
(2) ಕಥಾಸಂಕಲನ
(3) ಆತ್ಮಚರಿತ್ರೆ
(4) ನಾಟಕ

100. ಕೆಳಗಿನ I ಮತ್ತು II ಪಟ್ಟಿಯನ್ನು ಹೊಂದಿಸಿ, ಸಂಕೇತಗಳಿಂದ ಆಯ್ಕೆಮಾಡಿ.

| I | II |
|---|---|
| ಎ. ಸಾರಾ ಅಬೂಬಕರ್ | 1. ನೆಲೆ-ಬೆಲೆ |
| ಬಿ. ವೈದೇಹಿ | 2. ಸಮಸ್ಯೆಯ ಮಗು |
| ಸಿ. ಬಿ.ಟಿ.ಲಲಿತಾ ನಾಯಕ್ | 3. ಚಂದ್ರಗಿರಿಯ ತೀರದಲ್ಲಿ |
| ಡಿ. ತ್ರಿವೇಣಿ | 4. ಕ್ರೌಂಚ ಪಕ್ಷಿಗಳು |

ಸಂಕೇತಗಳು :

| | ಎ | ಬಿ | ಸಿ | ಡಿ |
|---|---|---|---|---|
| (1) | 2 | 3 | 4 | 1 |
| (2) | 4 | 1 | 2 | 3 |
| (3) | 2 | 1 | 4 | 3 |
| (4) | 3 | 4 | 1 | 2 |



Join Telegram https://t.me/edutubekannada

Downloaded from www.edutubekannada.com

9141111004 Saritha man

**EXAMINATION CODE : 04 HSTR-2**

| Dist. Code | | Registration No. | | | | | | |
|---|---|---|---|---|---|---|---|---|
| | | | | | | | | |

# QUESTION BOOKLET – PAPER-II

**(Read carefully the instructions given in the Question Booklet)**

**SUBJECT : LANGUAGE KANNADA**

**MAXIMUM MARKS : 100** **MAXIMUM TIME : 2 HOURS** **SUBJECT CODE : K A**

## INSTRUCTIONS TO THE CANDIDATES

1. The sealed Question Booklet containing **100** questions enclosed with O.M.R. Answer Sheet is given to you.
2. Verify whether the given question booklet is of the same subject which you have opted as in your Admission Ticket.
3. Open the question paper seal carefully and take out the enclosed OMR Answer Sheet outside the question booklet and fill up the general information from Sl. No. **1** to **10** of OMR Answer Sheet. If you fail to fill up the details in the form of alphabet and signs as instructed, you will be personally responsible for consequences arising during scoring of your answer sheet.
4. Enter the Question Paper Booklet Sl. No. in the OMR Answer Sheet at Sl. No. **4**.
5. Enter the Code of the subject you opted in the Sl. No. **9** of OMR Answer Sheet.
   (a) During the Examination :- Read each question carefully.
   (b) Select the correct answer out of the four choices given under each question. Completely darken/shade the relevant circle against Question No. in the OMR Answer Sheet. For Example, in a question paper if Sl. No. 3 is correct answer for question No. 20, then darken before Sl. No. 20 of OMR Answer Sheet using blue / black ball point pen as follows.

   **20.** ① ② ● ④ (Only example)
6. Rough work should be done only on the blank space provided in the Question Booklet. Rough work should not be done on the O.M.R. Answer Sheet.
7. If more than one circle is darkened for a given question, such answer is treated as wrong and no mark will be given. See the example in OMR Answer Sheet.
8. The candidate and the Room Supervisor should sign in the OMR Sheet at specified place. Candidate has to put left hand thumb impression at specified place compulsorily. Corrections/Overwriting on OMR Answer Sheet will be not entertained.
9. Each of the candidate is given carbonless O.M.R. sheet in duplicate. Candidate should return the **original O.M.R. Answer sheet to the Room Supervisor** and retain carbonless copy of the same with him after the examination.
10. Calculator, pager & mobile phones are not allowed inside the examination hall.
11. If a candidate is found committing malpractice, such a candidate shall not be considered for recruitment and action will be taken against such candidate as per rules.

## INSTRUCTIONS TO FILL UP THE O.M.R. ANSWER SHEET

**1. There is only one correct answer for each question.**
**2. All entries in the circle must be made with BLUE or BLACK ball point pen only. Do not try to alter the entry.**
**3. Circle should be darkened completely so that the numeral inside the circle is not visible.**
**4. Do not make any stray marks on this sheet.**
**5. This is a carbonless Answer Sheet. There is no need to shade the second copy separately.**

Use e-papers for Save Trees
Join Telegram https://t.me/edutubekannada
Above line Hide When Print Out-www.InyaTrust.com

**ಎಜ್ಯುಟ್ಯೂಬ್ ಕನ್ನಡ ವಿಶೇಷ ಪಿಡಿಎಫ್ ನೋಟ್ಸ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಈ ಕೆಳಗೆ ನೀಡಿದ ಲಿಂಕ್ ಮೇಲೆ ಕ್ಲಿಕ್ ಮಾಡಿ..!!!**

- ಪ್ರಚಲಿತ ವಿದ್ಯಮಾನಗಳಿಗಾಗಿ ಇಲ್ಲಿ ಕ್ಲಿಕ್ ಮಾಡಿ NEW
- ಮಿನಿ ವಿಜಯವಾಣಿ ವಿದ್ಯಾರ್ಥಿಮಿತ್ರ ಪತ್ರಿಕೆಗಾಗಿ ಇಲ್ಲಿ ಕ್ಲಿಕ್ ಮಾಡಿ NEW
- ಟಿಇಟಿ ನೋಟ್ಸ್‌ಗಳಿಗಾಗಿ ಇಲ್ಲಿ ಕ್ಲಿಕ್ ಮಾಡಿ NEW
- ಸುಲಲಿತ ಪಿಡಿಎಫ್ ನೋಟ್ಸ್‌ಗಾಗಿ ಇಲ್ಲಿ ಕ್ಲಿಕ್ ಮಾಡಿ NEW
- ಪಿಎಸ್‌ಐ ಪಿಡಿಎಫ್ ನೋಟ್ಸ್‌ಗಾಗಿ ಇಲ್ಲಿ ಕ್ಲಿಕ್ ಮಾಡಿ NEW
- ಎಲ್ಲ ಮ್ಯಾಗಝೀನ್‌ಗಳಿಗಾಗಿ ಇಲ್ಲಿ ಕ್ಲಿಕ್ ಮಾಡಿ NEW
- ಎಲ್ಲ ಹಳೆಯ ಪ್ರಶ್ನೆಪತ್ರಿಕೆಗಳಿಗಾಗಿ ಇಲ್ಲಿ ಕ್ಲಿಕ್ ಮಾಡಿ NEW
- –ಎಸ್‌ಎಸ್‌ಎಲ್‌ಸಿ ನೋಟ್ಸ್‌ಗಳಿಗಾಗಿ ಇಲ್ಲಿ ಕ್ಲಿಕ್ ಮಾಡಿ NEW
- ಪಿಯುಸಿ ನೋಟ್ಸ್‌ಗಳಿಗಾಗಿ ಇಲ್ಲಿ ಕ್ಲಿಕ್ ಮಾಡಿ NEW
- ಮಾದರಿ ಪ್ರಶ್ನೆಪತ್ರಿಕೆಗಳಿಗಾಗಿ ಇಲ್ಲಿ ಕ್ಲಿಕ್ ಮಾಡಿ NEW
- ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಪಯುಕ್ತವಾದ ಕ್ವಿಜ್ ಗಳಿಗಾಗಿ ಇಲ್ಲಿ ಕ್ಲಿಕ್ ಮಾಡಿ
- ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಅಧ್ಯಯನ ಸಾಮಗ್ರಿಗಳಿಗಾಗಿ ಇಲ್ಲಿ ಕ್ಲಿಕ್ ಮಾಡಿ NEW
- ಪಿಡಿಒ ಅಧ್ಯಯನ ಸಾಮಗ್ರಿಗಳಿಗಾಗಿ ಇಲ್ಲಿ ಕ್ಲಿಕ್ ಮಾಡಿ NEW
- ಪಿಎಸ್‌ಐ ಅಧ್ಯಯನ ಸಾಮಗ್ರಿಗಳಿಗಾಗಿ ಇಲ್ಲಿ ಕ್ಲಿಕ್ ಮಾಡಿ NEW
- ಪೊಲೀಸ್ ಕಾನ್ಸ್‌ಟೇಬಲ್ ಅಧ್ಯಯನ ಸಾಮಗ್ರಿಗಳಿಗಾಗಿ ಇಲ್ಲಿ ಕ್ಲಿಕ್ ಮಾಡಿ NEW
- ಎಲ್ಲ ಇಂಗ್ಲೀಷ್ ಮಾಧ್ಯಮದ ಪಿಡಿಎಫ್ ನೋಟ್ಸ್‌ಗಳಿಗಾಗಿ ಇಲ್ಲಿ ಕ್ಲಿಕ್ ಮಾಡಿ NEW
- ಎಲ್ಲ ಕೆಪಿಎಸ್‌ಸಿ ಉಚಿತ ನೋಟ್ಸ್‌ಗಳಿಗಾಗಿ ಇಲ್ಲಿ ಕ್ಲಿಕ್ ಮಾಡಿ NEW